1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ
ನ್ಯಾಯಾಲಯ ಚನ್ನಗಿರಿ .

ಸಿಸಿ ನಂ. **36/2022**

ಹೆಸರುಃ ರವಿ ಚಾಸಾಃ 2

ತಂದೆಃ ಬಸವರಾಜಪ್ಪ ಯಾನೆ ಬಸವರಾಜ ಪ್ರಾಸಾ:10

ವಯಸ್ಸುಃ 28

ಉದ್ಯೋಗಃ ವ್ಯಾಸಾಂಗ

ವಾಸ ಸ್ಥಳಃ ಗೊಪ್ಪೇನಹಳ್ಳಿ, ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 24-02-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 22.09.2021 ರಂದು ಚಾಸಾ 13 ರವರು ಕಳ್ಳತನದ ವಿಚಾರವಾಗಿ ಚಾಸಾ 1 ರವರ ಮನೆಗೆ ತನಿಖೆಗೆ ಬಂದು ಅಲ್ಲಿ ಸ್ಥಳ ಮಹಜರ್ ನ್ನು ಸಂಜೆ 5.00 ರಿಂದ 6.00 ರ ಸಮಯದಲ್ಲಿ ಜರುಗಿಸಿರುತ್ತಾರೆ. ಸ್ಥಳವನ್ನು ಚಾಸಾ 1 ರವರು ತೋರಿಸಿರುತ್ತಾರೆ. ಸದರಿ ಸ್ಥಳ ಮಹಜರ್ ಕಾಲಕ್ಕೆ ಹಾಜರಿದ್ದು ಸಹಿ ಮಾಡಿರುತ್ತೇನೆ. ನನ್ನ ಜೊತೆ ಚಾಸಾ 1 ಮತ್ತು 3 ರವರು ಸಹ ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿ ನಿಪಿ 16 ರಂತೆ ಇರುವ ಮಹಜರ್ ನ ಸಹಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ 16 ಸಿ ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ಆರೋಪಿತರ ಪರ ವಕೀಲರಿಂದ -**

ನಿಪಿ 16 ರ ಕಾಲಕ್ಕೆ ಮಹಜರ್ ಮಾಡಿದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಿಪಿ 16 ರ ಸಂಗತಿಗಳು ನನಗೆ ಗೊತ್ತು. ನಿಪಿ16 ಕ್ಕೆ ನಾನು ಪೋಲೀಸ್ ಠಾಣೆಯಲ್ಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮ್ಮುಖದಲ್ಲಿ ನಿಪಿ 16 ರಂತೆ ಯಾವುದೆ ಮಹಜರ್ ಮಾಡದೆ ಇದ್ದರು ಸಹ ಆರೋಪಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**
**ಚನ್ನಗಿರಿ.**